# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

**ವಿಶೇಷ ರಾಜ್ಯ ಪತ್ರಿಕೆ**

| ಭಾಗ – ೧<br>Part – I | ಬೆಂಗಳೂರು, ಶನಿವಾರ, ೨೯ ಆಗಸ್ಟ್, ೨೦೨೬ (ಭಾದ್ರಪದ ೦೭, ಶಕವರ್ಷ, ೧೯೪೮)<br>BENGALURU, SATURDAY, 29 AUGUST, 2026 ( BHADRAPADA 07, SHAKAVARSHA, 1948) | ನಂ. ೭೮೨<br>No.782 |
|---|---|---|


## ಕರ್ನಾಟಕ ಸರ್ಕಾರ ನಡವಳಿಗಳು

**ವಿಷಯ:** ರಾಜ್ಯದಲ್ಲಿನ ಸ್ಥಳೀಯ ಯೋಜನಾ ಪ್ರದೇಶ ಘೋಷಣೆಯಾಗದಿರುವ ಪಟ್ಟಣಗಳಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 4 (ಕೆ)(10) (ಬಿ) ರಡಿಯಲ್ಲಿ ಪ್ರದತ್ತವಾದ ಅಧಿಕಾರನ್ವಯ ತಯಾರಿಸಿರುವ GIS ಆಧಾರಿತ Road Network Grid Plan ಗೆ ಸದರಿ ಕಾಯ್ದೆಯ ಕಲಂ 13(1) ರಡಿಯಲ್ಲಿ ಸರ್ಕಾರದಿಂದ ತಾತ್ಕಾಲಿಕ ಅನುಮೋದನೆ ನೀಡುವ ಕುರಿತು.

**ಉಲ್ಲೇಖ:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳ ದಿನಾಂಕ:21-11-2025, ದಿನಾಂಕ:13-01-2026 ಮತ್ತು ದಿನಾಂಕ: 22-04-2026.
2. ಸರ್ಕಾರದ ಆದೇಶ ಸಂಖ್ಯೆ: ನಅಇ 25 TTP 2026 ದಿನಾಂಕ:18.07.2026
3. ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಏಕ ಕಡತ ಪ್ರಸ್ತಾವನೆ ಸಂಖ್ಯೆ: DTCP-TECHO-MP-10-2026 (2216364) ದಿನಾಂಕ: 19.08. 2026.

********

### ಪ್ರಸ್ತಾವನೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 4(ಎ) ರನ್ವಯ ರಾಜ್ಯದ ಪಟ್ಟಣಗಳಲ್ಲಿ ಸ್ಥಳೀಯ ಯೋಜನಾ ಪ್ರದೇಶಗಳನ್ನು ಘೋಷಿಸಿ ಮಹಾಯೋಜನೆಗಳನ್ನು ಸಿದ್ಧಪಡಿಸುವ ಕಾರ್ಯವು ಜಾರಿಯಲ್ಲಿದೆ. ಆದಾಗ್ಯೂ ರಾಜ್ಯದಲ್ಲಿನ ಕೆಲವು ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಗೆ ಇನ್ನೂ ಸ್ಥಳೀಯ ಯೋಜನಾ ಪ್ರದೇಶಗಳನ್ನು ಘೋಷಿಸಬೇಕಾಗಿದ್ದು ಆಡಳಿತಾತ್ಮಕ, ತಾಂತ್ರಿಕ ಹಾಗೂ ಎಲ್ಲೆಗಳ ನಿರ್ಧಾರಕ್ಕೆ ಸಂಬಂಧಿಸಿದ ಕಾರಣಗಳಿಂದ ಈ ಪ್ರಕ್ರಿಯೆಗೆ ಹೆಚ್ಚಿನ ಕಾಲಾವಕಾಶ ಅಗತ್ಯವಾಗಿರುತ್ತದೆ.

ಇಂತಹ ಪ್ರದೇಶಗಳಲ್ಲಿ ಯೋಜಿತ ಅಭಿವೃದ್ಧಿ ಹಾಗೂ ಭವಿಷ್ಯದ ನಗರ ವಿಸ್ತರಣೆಯನ್ನು ಸಮರ್ಪಕವಾಗಿ ನಿಯಂತ್ರಿಸಲು ಪ್ರಮುಖ ರಸ್ತೆ ಜಾಲರಿಂಗ್ / ವರ್ತುಲ ರಸ್ತೆ, ಆರ್ಟೀರಿಯಲ್ ಮತ್ತು ಸಬ್-ಆರ್ಟೀರಿಯಲ್ ಸಂಪರ್ಕ ರಸ್ತೆಗಳನ್ನು ಪ್ರಸ್ತಾಪಿಸಿ ಸಂರಕ್ಷಿಸುವುದು ಅತ್ಯಾಗತ್ಯವಾಗಿದೆ, ಇಲ್ಲವಾದಲ್ಲಿ ಅನಿಯಂತ್ರಿತ ಅಭಿವೃದ್ಧಿಯಿಂದ ಭವಿಷ್ಯದಲ್ಲಿ ರಸ್ತೆ ನಿರ್ಮಾಣ, ವಿಸ್ತರಣೆ ಹಾಗೂ ಸಾರ್ವಜನಿಕ

ಮೂಲಸೌಕರ್ಯ ಅಭಿವೃದ್ಧಿಗೆ ಅಡಚಣೆ ಉಂಟಾಗಿ ಸರ್ಕಾರಕ್ಕೆ ಹೆಚ್ಚಿನ ಭೂಸ್ವಾಧೀನ ವೆಚ್ಚ ಮತ್ತು ಸಾರ್ವಜನಿಕ ಹಿತಾಸಕ್ತಿಗೆ ಧಕ್ಕೆಯಾಗುವ ಸಾಧ್ಯತೆ ಇರುತ್ತದೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 4 (ಕೆ) (10) (ಬಿ) ರನ್ವಯ ಸ್ಥಳೀಯ ಯೋಜನಾ ಘೋಷಣೆಯಾಗದಿರುವ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿ ಹಾಗೂ ಅವುಗಳ ಸುತ್ತಮುತ್ತಲಿನ ಬೆಳವಣಿಗೆಯ ಪ್ರದೇಶಗಳನ್ನು ಒಳಗೊಂಡಂತೆ Settlement Extension Plan ಅಡಿಯಲ್ಲಿ ಜಿಐಎಸ್ (GIS) ಆಧಾರಿತ ರಸ್ತೆ ಜಾಲದ ಯೋಜನೆಯನ್ನು (Road Network Grid Plan) ಕೆಳಕಂಡ ಕಾಯ್ದೆಯ ಅವಕಾಶದಡಿ ಸಿದ್ಧಪಡಿಸಲಾಗಿದೆ.

Section 4-K(10)(b) of the Karnataka Town and Country Planning Act provides for preparation of Village or Settlement Extension Plan by the Director of Town and Country Planning.

> ***“Settlement Extension Plan means a plan prepared and approved by the Government for regulating the growth and expansion of a town or urban settlement in areas not covered by a Local Planning Area, broadly indicating the circulation pattern, including the road network grid system”***

ಈ ಯೋಜನೆಯಲ್ಲಿ ನಗರ ಸ್ಥಳೀಯ ಸಂಸ್ಥೆಯ ಎಲ್ಲೆಯ ಹೊರಭಾಗದಲ್ಲಿರುವ ಹಾಲಿ ರಸ್ತೆ ಸಂಪರ್ಕವನ್ನು ಪರಿಗಣಿಸಿಕೊಂಡು Road Network Grid Plan ನ್ನು ಸಮಗ್ರವಾಗಿ ರೂಪಿಸಲಾಗಿದೆ.

ಸದರಿ ಯೋಜನೆಯು ಮುಂದಿನ ದಿನಗಳಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಗೆ ಸ್ಥಳೀಯ ಯೋಜನಾ ಪ್ರದೇಶ ಘೋಷಣೆಗೊಂಡು ಮಹಾಯೋಜನೆಯನ್ನು ಸಿದ್ಧಪಡಿಸುವವರೆಗೆ ಭೂ ಅಭಿವೃದ್ಧಿಗಳಿಗೆ ಅನುಮತಿಸುವಾಗ ಪ್ರಮುಖ ಮಾರ್ಗದರ್ಶಕ ದಾಖಲೆಯಾಗಿ ಬಳಸುವ ಉದ್ದೇಶ ಹೊಂದಿರುತ್ತದೆ.

ಆದ್ದರಿಂದ ಮೇಲೆ ಓದಲಾದ ಉಲ್ಲೇಖ(1)ರ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಗಳಲ್ಲಿ ಕೈಗೊಂಡ ನಿರ್ಣಯಗಳಂತೆ ಸ್ಥಳೀಯ ಯೋಜನಾ ಪ್ರದೇಶ ಘೋಷಣೆಯಾಗದಿರುವ 108 ಪಟ್ಟಣಗಳ ಪೈಕಿ ಮೊದಲ ಹಂತದಲ್ಲಿ 52 ಪಟ್ಟಣಗಳಿಗೆ ಮೇಲೆ ಓದಲಾದ ಉಲ್ಲೇಖ(2) ಸರ್ಕಾರದ ಆದೇಶದಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 4(ಕೆ)10)(ಬಿ) ರಡಿ ತಯಾರಿಸಿರುವ Road Network Grid Planಗಳಿಗೆ ಸದರಿ ಕಾಯ್ದೆಯ ಕಲಂ 13(1) ರನ್ವಯ ಸರ್ಕಾರದ ತಾತ್ಕಾಲಿಕ ಅನುಮೋದನೆಯನ್ನು ನೀಡಲಾಗಿದೆ.

ಮುಂದುವರೆದು ಮೇಲೆ ಓದಲಾದ ಉಲ್ಲೇಖ(1)ರ ಸಭೆಯ ನಿರ್ಣಯದಂತೆ ಸ್ಥಳೀಯ ಯೋಜನಾ ಪ್ರದೇಶ ಘೋಷಣೆಯಾಗದಿರುವ ಪಟ್ಟಣಗಳ ಪೈಕಿ ಎರಡನೇ ಹಂತದಲ್ಲಿ ಉಳಿದ 57 ಪಟ್ಟಣಗಳಿಗೆ Road Network Grid Planನ್ನು ಸಿದ್ಧಪಡಿಸಿ ಮೇಲೆ ಓದಲಾದ ಉಲ್ಲೇಖ (3) ರಲ್ಲಿ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಏಕಕಡತದಲ್ಲಿ 57 ನಗರ ಸ್ಥಳೀಯ ಸಂಸ್ಥೆಗಳಿಗೆ Road Network Grid Planಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 13(1) ರನ್ವಯ ತಾತ್ಕಾಲಿಕ ಅನುಮೋದನೆ ನೀಡಲು ತಮ್ಮ ಶಿಫಾರಸ್ಸಿನೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ನಅಇ 25 ಟಿಟಿಪಿ 2026 (ಇ),**
**ಬೆಂಗಳೂರು, ದಿನಾಂಕ:29.08.2026**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ರಾಜ್ಯದ ಸ್ಥಳೀಯ ಯೋಜನಾ ಪ್ರದೇಶ ಘೋಷಣೆಯಾಗದಿರುವ ಪಟ್ಟಣಗಳ ಪೈಕಿ ಎರಡನೇ ಹಂತದಲ್ಲಿ 57 ಪಟ್ಟಣಗಳಿಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 4(ಕೆ)10)(ಬಿ) ರಡಿ ತಯಾರಿಸಿರುವ Road Network Grid Planಗಳಿಗೆ ಸದರಿ ಕಾಯ್ದೆಯ ಕಲಂ 13(1) ರನ್ವಯ ಈ ಕೆಳಕಂಡ ನಿರ್ದೇಶನಗಳೊಂದಿಗೆ ಸರ್ಕಾರದ ತಾತ್ಕಾಲಿಕ ಅನುಮೋದನೆಯನ್ನು ನೀಡಲಾಗಿದೆ.

ಅನುಮೋದನೆ ನೀಡಿರುವ ಗುರುತಾಗಿ ನಕ್ಷೆಗಳ ಮೇಲೆ ಸರ್ಕಾರದ ಮುದ್ರೆಯನ್ನು ಹಾಕಲಾಗಿದೆ.

1. ದಿನಾಂಕ: 13-01-2026 ರಂದು ನಡೆದ ಸಭೆಯ ತೀರ್ಮಾನದನ್ವಯ, Road Network Grid ಯೋಜನೆಗೆ ತಗಲುವ ಖರ್ಚು-ವೆಚ್ಚಗಳನ್ನು ಕರ್ನಾಟಕ ನಗರ ಯೋಜನಾ ಮಂಡಳಿಯವತಿಯಿಂದ ಭರಿಸತಕ್ಕದ್ದು.

2. **ಅನುಬಂಧ-1**ರಲ್ಲಿನ ಪಟ್ಟಣಗಳಿಗೆ ಸ್ಥಳೀಯ ಯೋಜನಾ ಪ್ರದೇಶ ಘೋಷಣೆಗೊಂಡು, ಮಹಾಯೋಜನೆಯು ಅಂತಿಮವಾಗಿ ಅನುಮೋದನೆಯಾಗುವವರೆಗೆ, Road Network Grid Planಗಳಲ್ಲಿ ಕಾಯ್ದಿರಿಸಿರುವ ರಸ್ತೆಗಳನ್ನು ಅಭಿವೃದ್ಧಿ ಅನುಮೋದನೆಗಳಲ್ಲಿ ಮಾರ್ಗದರ್ಶಕ ದಾಖಲೆಯನ್ನಾಗಿ ಕಡ್ಡಾಯವಾಗಿ ಅನುಸರಿಸತಕ್ಕದ್ದು.

3. **ಅನುಬಂಧ-2**ರಲ್ಲಿನ ನಮೂದಿಸಲಾಗಿರುವ ಸಂಬಂಧಪಟ್ಟ ಸಹಾಯಕ ನಿರ್ದೇಶಕರ ಕಚೇರಿಗಳಲ್ಲಿ ಹಾಗೂ ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳ ಕಚೇರಿಗಳಲ್ಲಿ Road Network Grid Plan ಗಳನ್ನು ಸಾರ್ವಜನಿಕರ ವೀಕ್ಷಣೆಗಾಗಿ ಇರಿಸತಕ್ಕದ್ದು.

4. ಸಾರ್ವಜನಿಕರು 60 ದಿನಗಳ ನಿಗಧಿತ ಕಾಲಾಮಿತಿಯೊಳಗೆ **ಅನುಬಂಧ-2** ರಲ್ಲಿನ ಸಂಬಂಧಪಟ್ಟ ನಗರ ಮತ್ತು ಗ್ರಾಮಾಂತರ ಸಹಾಯಕ ನಿರ್ದೇಶಕರ ಕಚೇರಿಗಳಿಗೆ ಸಲ್ಲಿಸುವ ಸಲಹೆ/ಆಕ್ಷೇಪಣೆಗಳನ್ನು ನಿಯಮಾನುಸಾರ ಪರಿಶೀಲಿಸಿ, ಪರಿಗಣಿಸಬಹುದಾದ ಹಾಗೂ ತಿರಸ್ಕರಿಸಬಹುದಾದ ಸಲಹೆ/ಆಕ್ಷೇಪಣೆಗಳ ಕುರಿತು ಅಗತ್ಯ ಕ್ರಮಕೈಗೊಂಡು ಪ್ರಸ್ತಾವನೆಯನ್ನು ನಿರ್ದೇಶಕರು ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಗೆ ಸಲ್ಲಿಸತಕ್ಕದ್ದು.

5. 57 ಪಟ್ಟಣಗಳಿಗೆ ಪ್ರಸ್ತಾಪಿಸಿರುವ 30.0ಮೀ ಅಗಲದ ವರ್ತುಲ ರಸ್ತೆಯ ಎರಡು ಬದಿಯಲ್ಲಿ 2.0 ಕಿ.ಮೀ ವರೆಗೆ Impact Zone ಎಂದು ಪರಿಗಣಿಸಿ, ಸದರಿ Impact Zone ನಲ್ಲಿ ಅನುಮತಿಸಬಹುದಾದ ಉಪಯೋಗಗಳನ್ನು **ಅನುಬಂಧ-3**ರಲ್ಲಿ ನಮೂದಿಸಿದ್ದು, ಅದರಂತೆ ಅನುಮತಿಗಳಿಗೆ ಸಕ್ಷಮ ಪ್ರಾಧಿಕಾರಗಳು 4(ಕೆ) ನಿಯಮಗಳಡಿ ಅಭಿವೃದ್ಧಿಗಳಿಗೆ ಅನುಮತಿ ನೀಡಲು ಕ್ರಮವಹಿಸತಕ್ಕದ್ದು.

6. ನಿರ್ದೇಶಕರು ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ರವರು ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 13(2) ರನ್ವಯ ಸರ್ಕಾರದ ಅಂತಿಮ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಲು ಕ್ರಮವಹಿಸತಕ್ಕದ್ದು.

7. ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳು ಹಾಗೂ ಇತರೆ ಇಲಾಖೆಗಳು ವಸತಿ (ಬಡಾವಣೆ) ನಿರ್ಮಾಣ, ರಸ್ತೆನಿರ್ಮಾಣ, ಮತ್ತು ಇತರೆ ಅಭಿವೃದ್ಧಿಗಳಿಗೆ ಅನುಮತಿಸುವಾಗ ಹಾಗೂ ಇತರೆ ಮೂಲಸೌಕರ್ಯ ಯೋಜನೆಗಳನ್ನು ಮಂಜೂರು ಮಾಡುವಾಗ Road Network Grid Plan ಗಳನ್ನು ಕಡ್ಡಾಯವಾಗಿ ಪರಿಗಣಿಸತಕ್ಕದ್ದು.

8. ಮುಂದಿನ ದಿನಗಳಲ್ಲಿ **ಅನುಬಂಧ-1**ರಲ್ಲಿನ ಪಟ್ಟಣಗಳಿಗೆ ಸ್ಥಳೀಯ ಯೋಜನಾ ಪ್ರದೇಶ ಘೋಷಿಸಿ ಮಹಾಯೋಜನೆ ಸಿದ್ದಪಡಿಸುವ ಸಂದರ್ಭದಲ್ಲಿ Road Network Grid Plan ಗಳನ್ನು ಮೂಲ ಆಧಾರ ದಾಖಲೆಯಾಗಿ ಪರಿಗಣಿಸಿ ಅಗತ್ಯ ತಿದ್ದುಪಡಿಗಳೊಂದಿಗೆ ಮಹಾಯೋಜನೆಯಲ್ಲಿ ಆಳವಡಿಸಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಲತಾ. ಕೆ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಅಭಿವೃದ್ಧಿ ಪ್ರಾಧಿಕಾರ ಮತ್ತು ನಯೋಸೇ
ನಗರಾಭಿವೃದ್ಧಿ ಇಲಾಖೆ

# ಅನುಬಂಧ-1

## ಎರಡನೇ ಹಂತದ Road Network Grid Plan ತಯಾರಿಸಲಾಗಿರುವಪಟ್ಟಣಗಳವಿವರ

| ಕ್ರ.ಸ | ಪಟ್ಟಣದ ಹೆಸರು | ತಾಲ್ಲೂಕು | ಜಿಲ್ಲೆ |
|---|---|---|---|
| 1. | ಬೆಳಗಲಿ | ಮುಧೋಳ | ಬಾಗಲಕೋಟೆ |
| 2. | ಲೋಕಾಪುರ | | |
| 3. | ತೆಕ್ಕಲಕೋಟೆ | ಸಿರಗುಪ್ಪ | ಬಳ್ಳಾರಿ |
| 4. | ಕುರಗೋಡು | ಕುರಗೋಡು | |
| 5. | ಎಂ.ಕೆಹುಬ್ಬಳ್ಳಿ | ಕಿತ್ತೂರು | ಬೆಳಗಾವಿ |
| 6. | ಮುನವಳ್ಳಿ | ಸವದತ್ತಿ | |
| 7. | ಯರಗಟ್ಟಿ | ಯರಗಟ್ಟಿ | |
| 8. | ಎಕ್ಸಂಬಾ | ಚಿಕ್ಕೋಡಿ | |
| 9. | ಸದಲಗಾ | | |
| 10. | ಕಬ್ಬೂರು | | |
| 11. | ಅಂಕಲಗಿ | ಗೋಕಾಕ್ | |
| 12. | ಕೊನ್ನೂರು | | |
| 13. | ಘಟಪ್ರಭ | | |
| 14. | ಕಾಗವಾಡ | ಕಾಗವಾಡ | |
| 15. | ಶೇಡಬಾಳ್ | | |
| 16. | ಉಗಾರ-ಖುರ್ದ್ | | |
| 17. | ಅರಭಾವಿ | ಮೂಡಲಗಿ | |
| 18. | ಕಲ್ಲೊಳಿ | | |
| 19. | ನಾಗನೂರು | | |
| 20. | ಬೋರಂಗಾವ್ | ನಿಪ್ಪಾಣಿ | |
| 21. | ಚಿಂಚಲಿ | ರಾಯಭಾಗ | |
| 22. | ಹಾರೋಗೇರಿ | | |
| 23. | ಕಂಕನವಾಡಿ | | |
| 24. | ಮುಗಳಖೋಡ | | |
| 25. | ರಾಯಭಾಗ | | |
| 26. | ಶೃಂಗೇರಿ | ಶೃಂಗೇರಿ | ಚಿಕ್ಕಮಗಳೂರು |
| 27. | ಮುಳುಗುಂದ | ಗದಗ | ಗದಗ |
| 28. | ಗಜೇಂದ್ರಗಡ | ಗಜೇಂದ್ರಗಡ | |
| 29. | ನರೇಗಲ್ಲ | | |
| 30. | ಮುಂಡರಗಿ | ಮುಂಡರಗಿ | |
| 31. | ಗುತ್ತಲ | ಹಾವೇರಿ | ಹಾವೇರಿ |
| 32. | ರಟ್ಟಿಹಳ್ಳಿ | ರಟ್ಟಿಹಳ್ಳಿ | |
| 33. | ಶಿಗ್ಗಾಂವ್ | ಶಿಗ್ಗಾಂವ್ | |
| 34. | ಪೊನ್ನಂಪೇಟೆ | ಪೊನ್ನಂಪೇಟೆ | ಕೊಡಗು |
| 35. | ಕಾರಟಗಿ | ಕಾರಟಗಿ | ಕೊಪ್ಪಳ |
| 36. | ತಾವರಗೆರ | ಕುಷ್ಟಗಿ | |
| 37. | ಸಿರವಾರ | ಸಿರವಾರ | ರಾಯಚೂರು |
| 38. | ಜೋಗ-ಕಾರ್ಗಲ್ | ಸಾಗರ | ಶಿವಮೊಗ್ಗ |
| 39. | ಶಿರಾಳಕೊಪ್ಪ | ಶಿಕಾರಿಪುರ | |
| 40. | ಬೈಂದೂರು | ಬೈಂದೂರು | ಉಡುಪಿ |

| | | | |
|---|---|---|---|
| 41. | ಅಂಕೋಲಾ | ಅಂಕೋಲಾ | ಉತ್ತರಕನ್ನಡ |
| 42. | ಜಾಲಿ | ಭಟ್ಕಳ | |
| 43. | ಮಂಕಿ | ಹೊನ್ನಾವರ | |
| 44. | ಮುಂಡಗೋಡು | ಮುಂಡಗೋಡು | |
| 45. | ಯಲ್ಲಾಪುರ | ಯಲ್ಲಾಪುರ | |
| 46. | ಕೂಡ್ಲಿಗಿ | ಕೂಡ್ಲಿಗಿ | ವಿಜಯನಗರ |
| 47. | ಆಲಮೇಲ | ಆಲಮೇಲ | ವಿಜಯಪುರ |
| 48. | ಬಬಲೇಶ್ವರ | ಬಬಲೇಶ್ವರ | |
| 49. | ಮನಗುಳಿ | ಬಸವನಬಾಗೇವಾಡಿ | |
| 50. | ಚಡಚಣ | ಚಡಚಣ | |
| 51. | ದೇವರಹಿಪ್ಪರಗಿ | ದೇವರಹಿಪ್ಪರಗಿ | |
| 52. | ಕೋಲ್ಹಾರ | ಕೋಲ್ಹಾರ | |
| 53. | ನಲತ್ತವಾಡ | ಮುದ್ದೆಬಿಹಾಳ | |
| 54. | ನಿಡಗುಂದಿ | ನಿಡಗುಂದಿ | |
| 55. | ತಿಕೋಟ | ತಿಕೋಟ | |
| 56. | ಗುರುಮಿಠಕಲ್ | ಗುರುಮಿಠಕಲ್ | ಯಾದಗಿರಿ |
| 57. | ಕಕ್ಕೇರಾ | ಶೋರಪುರ | |

**(ಲತಾ. ಕೆ)**
ಸರ್ಕಾರದ ಅಧೀನ ಕಾರ್ಯದರ್ಶಿ
(ಅಭಿವೃದ್ಧಿ ಪ್ರಾಧಿಕಾರ ಮತ್ತು ನಯೋಸೇ
ನಗರಾಭಿವೃದ್ಧಿಇಲಾಖೆ

## ಅನುಬಂಧ-2

**Road Network Grid Plan ಗೆ ಸಂಬಂಧಿಸಿದಂತೆ ಸಲಹೆ/ ಆಕ್ಷೇಪಣೆಯನ್ನು ಸಲ್ಲಿಸಬೇಕಾದ ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಚೇರಿಗಳ ವಿವರ:**

| ಕ್ರ.ಸ | ಪಟ್ಟಣದ ಹೆಸರು | ತಾಲ್ಲೂಕು | ಜಿಲ್ಲೆ | ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿ |
|---|---|---|---|---|
| 1. | ಬೆಳಗಲಿ | ಮುಧೋಳ | ಬಾಗಲಕೋಟೆ | ಸಹಾಯಕ ನಿರ್ದೇಶಕರ ಕಛೇರಿ, ಜಮಖಂಡಿ |
| 2. | ಲೋಕಾಪುರ | | | |
| 3. | ತೆಕ್ಕಲಕೋಟೆ | ಸಿರಗುಪ್ಪ | ಬಳ್ಳಾರಿ | ಸಹಾಯಕ ನಿರ್ದೇಶಕರ ಕಛೇರಿ, ಬಳ್ಳಾರಿ |
| 4. | ಕುರಗೋಡು | ಕುರಗೋಡು | | |
| 5. | ಎಂ.ಕೆಹುಬ್ಬಳ್ಳಿ | ಕಿತ್ತೂರು | ಬೆಳಗಾವಿ | ಸಹಾಯಕ ನಿರ್ದೇಶಕರ ಕಛೇರಿ, ಬೆಳಗಾವಿ |
| 6. | ಮುನವಳ್ಳಿ | ಸವದತ್ತಿ | | |
| 7. | ಯರಗಟ್ಟಿ | ಯರಗಟ್ಟಿ | | |
| 8. | ಎಕ್ಸಂಬಾ | ಚಿಕ್ಕೋಡಿ | | ಸಹಾಯಕ ನಿರ್ದೇಶಕರ ಕಛೇರಿ, ನಿಪ್ಪಾಣಿ |
| 9. | ಸದಲಗಾ | | | |
| 10. | ಕಬ್ಬೂರು | | | |
| 11. | ಅಂಕಲಗಿ | ಗೋಕಾಕ್ | | |
| 12. | ಕೊಣ್ಣೂರು | | | |
| 13. | ಘಟಪ್ರಭ | | | |
| 14. | ಕಾಗವಾಡ | ಕಾಗವಾಡ | | |
| 15. | ಶೇಡಬಾಳ್ | | | |

| | | | | |
|---|---|---|---|---|
| 16. | ಉಗಾರ-ಖುರ್ದ್ | | | |
| 17. | ಅರಭಾವಿ | ಮೂಡಲಗಿ | | |
| 18. | ಕಲ್ಲೊಳ್ಳಿ | | | |
| 19. | ನಾಗನೂರು | | | |
| 20. | ಬೋರಂಗಾವ್ | ನಿಪ್ಪಾಣಿ | | |
| 21. | ಚಿಂಚಲಿ | ರಾಯಭಾಗ | | |
| 22. | ಹಾರೋಗೇರಿ | | | |
| 23. | ಕಂಕನವಾಡಿ | | | |
| 24. | ಮುಗಳಖೋಡ | | | |
| 25. | ರಾಯಭಾಗ | | | |
| 26. | ಶೃಂಗೇರಿ | ಶೃಂಗೇರಿ | ಚಿಕ್ಕಮಗಳೂರು | ಸಹಾಯಕ ನಿರ್ದೇಶಕರ ಕಛೇರಿ, ಚಿಕ್ಕಮಗಳೂರು |
| 27. | ಮುಳುಗುಂದ | ಗದಗ | ಗದಗ | ಸಹಾಯಕ ನಿರ್ದೇಶಕರ ಕಛೇರಿ, ಗದಗ |
| 28. | ಗಜೇಂದ್ರಗಡ | ಗಜೇಂದ್ರಗಡ | | |
| 29. | ನರೇಗಲ್ಲ | | | |
| 30. | ಮುಂಡರಗಿ | ಮುಂಡರಗಿ | | |
| 31. | ಗುತ್ತಲ | ಹಾವೇರಿ | ಹಾವೇರಿ | ಸಹಾಯಕ ನಿರ್ದೇಶಕರ ಕಛೇರಿ, ಹಾವೇರಿ |
| 32. | ರಟ್ಟಿಹಳ್ಳಿ | ರಟ್ಟಿಹಳ್ಳಿ | | |
| 33. | ಶಿಗ್ಗಾಂವ್ | ಶಿಗ್ಗಾಂವ್ | | |
| 34. | ಪೊನ್ನಂಪೇಟೆ | ಪೊನ್ನಂಪೇಟೆ | ಕೊಡಗು | ಸಹಾಯಕ ನಿರ್ದೇಶಕರ ಕಛೇರಿ, ಮಡಿಕೇರಿ |
| 35. | ಕಾರಟಗಿ | ಕಾರಟಗಿ | ಕೊಪ್ಪಳ | ಸಹಾಯಕ ನಿರ್ದೇಶಕರ ಕಛೇರಿ, ಕೊಪ್ಪಳ |
| 36. | ತಾವರಗೆರ | ಕುಷ್ಟಗಿ | | |
| 37. | ಸಿರವಾರ | ಸಿರವಾರ | ರಾಯಚೂರು | ಸಹಾಯಕ ನಿರ್ದೇಶಕರ ಕಛೇರಿ, ರಾಯಚೂರು |
| 38. | ಜೋಗ-ಕಾರ್ಗಲ್ | ಸಾಗರ | ಶಿವಮೊಗ್ಗ | ಸಹಾಯಕ ನಿರ್ದೇಶಕರ ಕಛೇರಿ, ಶಿವಮೊಗ್ಗ |
| 39. | ಶಿರಾಳಕೊಪ್ಪ | ಶಿಕಾರಿಪುರ | | |
| 40. | ಬೈಂದೂರು | ಬೈಂದೂರು | ಉಡುಪಿ | ಸಹಾಯಕ ನಿರ್ದೇಶಕರ ಕಛೇರಿ, ಉಡುಪಿ |
| 41. | ಅಂಕೋಲಾ | ಅಂಕೋಲಾ | ಉತ್ತರಕನ್ನಡ | ಸಹಾಯಕ ನಿರ್ದೇಶಕರ ಕಛೇರಿ, ಕಾರವಾರ |
| 42. | ಜಾಲಿ | ಭಟ್ಕಳ | | |
| 43. | ಮಂಕಿ | ಹೊನ್ನಾವರ | | |
| 44. | ಮುಂಡಗೋಡು | ಮುಂಡಗೋಡು | | ಸಹಾಯಕ ನಿರ್ದೇಶಕರ ಕಛೇರಿ, ಶಿರಸಿ |
| 45. | ಯಲ್ಲಾಪುರ | ಯಲ್ಲಾಪುರ | | |
| 46. | ಕೂಡ್ಲಿಗಿ | ಕೂಡ್ಲಿಗಿ | ವಿಜಯನಗರ | ಸಹಾಯಕ ನಿರ್ದೇಶಕರ ಕಛೇರಿ, ವಿಜಯನಗರ |
| 47. | ಆಲಮೇಲ | ಆಲಮೇಲ | ವಿಜಯಪುರ | ಸಹಾಯಕ ನಿರ್ದೇಶಕರ ಕಛೇರಿ, ವಿಜಯಪುರ |
| 48. | ಬಬಲೇಶ್ವರ | ಬಬಲೇಶ್ವರ | | |
| 49. | ಮನಗುಳಿ | ಬಸವನಬಾಗೇವಾಡಿ | | |
| 50. | ಚಡಚಣ | ಚಡಚಣ | | |
| 51. | ದೇವರಹಿಪ್ಪರಗಿ | ದೇವರಹಿಪ್ಪರಗಿ | | |
| 52. | ಕೋಲ್ಹಾರ | ಕೋಲ್ಹಾರ | | |
| 53. | ನಲತ್ತವಾಡ | ಮುದ್ದೆಬಿಹಾಳ | | |

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



| | | | | |
|---|---|---|---|---|
| 54. | ನಿಡಗುಂದಿ | ನಿಡಗುಂದಿ | | |
| 55. | ತಿಕೋಟ | ತಿಕೋಟ | | |
| 56. | ಗುರುಮಿಠಕಲ್ | ಗುರುಮಿಠಕಲ್ | ಯಾದಗಿರಿ | ಸಹಾಯಕ ನಿರ್ದೇಶಕರ ಕಛೇರಿ, ಯಾದಗಿರಿ |
| 57. | ಕಕ್ಕೇರಾ | ಶೋರಪುರ | | |

**(ಲತಾ. ಕೆ)**
ಸರ್ಕಾರದ ಅಧೀನ ಕಾರ್ಯದರ್ಶಿ
(ಅಭಿವೃದ್ಧಿ ಪ್ರಾಧಿಕಾರ ಮತ್ತು ನಯೋಸೇ)
ನಗರಾಭಿವೃದ್ಧಿ ಇಲಾಖೆ

## <u>ಅನುಬಂಧ-3</u>

## List of high density development activities permitted in the Impact Zone (2km on either side of the Proposed RingRoad)

| Sl.No | Category of Developments | Permissible activities allowed in the Impact zone |
|---|---|---|
| 1 | RESIDENTIAL | Residential townships, Apartments, Residential High-rise buildings, and its ancillary activities, Town Planning Schemes, All Government Projects etc. |
| 2 | COMMERCIAL | Wholesale Market, Hotels, Warehouses, Offices, Banks, Supermarkets, Automobile Showrooms and Service Centers, Business Parks, APMC yard, Community Hall etc. |
| 3 | INDUSTRIAL | All industrial activities except hazardous industries |
| 4 | PUBLIC & SEMI PUBLIC | Schools, Colleges, Hospitals, Skill development Centers, Government Offices, Community Facilities, Police station, Fire station, Sports Complex, Religious/Worship Places etc. |
| 5 | PARK & OPEN SPACE | Parks, Urban/Peri-urban Forestry, Open Space, Biodiversity Areas etc. |
| 6 | Water Bodies | Rejuvenation of water bodies like lakes, canals etc. |
| 7 | TRANSPORTATION AND COMMUNICATION | Bus Terminal, Truck Terminal, Logistics Hub, Multimodal Facility, Transport Depot, Parking, EV Charging,Fuel Stations, Warehousing, Logistics Park, Distribution Centers, Cold Storage, Freight Yard, Agricultural Logistics etc. |
| 8 | TOURISM & RECREATION | Resorts, Tourism Facilities, Amusement park, water Sports, Farm Tourism, Recreation Centers, Eco-Tourism etc. |
| 9 | PUBLIC UTILITIES | Water Supply, STP, Solid Waste Facility, Substation, Dumping yard, Utilities, Infrastructure Facilities etc. |
| 10 | AGRICULTURAL | Agri Market, Farm Gate Processing, Nurseries, Rain water harvesting, Horticulture, Orchards, Agricultural Storage, All renewable energy projects etc. |

**(ಲತಾ. ಕೆ)**
ಸರ್ಕಾರದ ಅಧೀನ ಕಾರ್ಯದರ್ಶಿ
(ಅಭಿವೃದ್ಧಿ ಪ್ರಾಧಿಕಾರ ಮತ್ತು ನಯೋಸೇ)
ನಗರಾಭಿವೃದ್ಧಿ ಇಲಾಖೆ.

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

P S BASAVARAJU